(ಇ) ದೂರುಗಳನ್ನು ಪರಿಶೀಲಿಸಿ ಮೇಲ್ಕಾಣಿಸಿದ ಸ್ಥಳಗಳಲ್ಲಿ ಮದ್ಯದ ಅಂಗಡಿಗಳಿದ್ದರೆ ಅಂತಹವುಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಜಿ. ರಾಜೂಗೌಡ (ಹನೂರು).—ಸನ್ಮಾನ್ಯ ಸಭಾಧ್ಯಕ್ಷರೇ, (ಆ) ಪ್ರಶ್ನೆಗೆ ಬಂದಿವೆ ಎಂದೂ ಹೇಳಿದ್ದಾರೆ. ಹಾಗಾದರೆ ಎಷ್ಟು ದೂರುಗಳು ಬಂದಿವೆ ? ಯಾವ ಯಾವ ದೂರುಗಳ ಬಗ್ಗೆ ಯಾವ ಯಾವ ಕ್ರಮ ಕೈಗೊಂಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಸಚಿವರು) (ಆಬ್ಕಾರಿ ಸಚಿವರ ಪರವಾಗಿ).—ಎಷ್ಟು ಸಂಖ್ಯೆಯಲ್ಲಿ ಎಂಬುದನ್ನು ಹೇಳಲಾರೆ. ಕೆಲವು ಸಾರಿ ಮದ್ಯದ ಅಂಗಡಿಗಳು ಕಾನೂನಿಗೆ ವಿರುದ್ಧವಾಗಿ ತೆರೆದಿದ್ದರೆ, ಅವು ನಮ್ಮ ಗಮನಕ್ಕೆ ತಂದರೆ, ಅವುಗಳನ್ನು ಅಲ್ಲಿಂದ ಷಿಫ್ಟ್ ಮಾಡುತ್ತೇವೆ. ಕೆಲವು ಕಡೆಗಳಲ್ಲಿ ಬಹಳ ಕಾಲದಿಂದ ನೋಟಿಫೈ ಮಾಡಿದಂತಹ ಮದ್ಯದ ಅಂಗಡಿಗಳೂ ಇರುತ್ತವೆ. ಇಂತಹವುಗಳನ್ನು ತೆಗೆಯುವುದಕ್ಕೆ ಬರುವುದಿಲ್ಲ. ಮುಂದೆ ನೋಟಿಫೈ ಮಾಡಿ ತೆಗೆಯಬೇಕಾಗುತ್ತದೆ,

ಶ್ರೀ ಜಿ. ರಾಜೂಗೌಡ.—ಮೈಸೂರಿನ ಒಂಟಿಕೊಪ್ಪಲ್ ಹತ್ತಿರ ಈಶ್ವರ ದೇವಾಲಯದ ಹತ್ತಿರ ಮತ್ತು ವಾಣಿವಿಲಾಸ ಮಾರ್ಕೆಟ್ ಹತ್ತಿರ ಇರತಕ್ಕ ನವಗ್ರಹ ದೇವಸ್ಥಾನದ ಹತ್ತಿರ ಮದ್ಯದ ಅಂಗಡಿಗಳನ್ನು ತೆರೆದಿದ್ದು, ಇವುಗಳನ್ನು ತೆಗೆಯುವ ಬಗ್ಗೆ ಮಹಿಳೆಯರು ಜಿಲ್ಲಾಧಿಕಾರಿಗಳ ಬಳಿ ಜಾಥಾ ಹೋಗಿದ್ದಾರೆ. ಆದರೂ ಕಂಟ್ರಾಕ್ಟರುಗಳ ಕಪಿ ಮುಷ್ಟಿಗೆ ಬಿದ್ದು, ಏನೂ ಕಾರ್ಯಕ್ರಮ ಕೈಗೊಳ್ಳದಿರುವುದು ನಿಜವೇ ?

ಶ್ರೀ ಜೆ. ಹೆಚ್. ಪಟೇಲ್.—ಈ ಸರ್ಕಾರ ಕಂಟ್ರಾಕ್ಟರ ಕಪಿ ಮುಷ್ಟಿಗೇ ಆಗಲೀ ಅಥವಾ ಯಾವ ಮುಷ್ಟಿಗೇ ಆಗಲಿ ಸಿಕ್ಕಿಲ್ಲ. ಹರಾಜು ಮಾಡುವುದಕ್ಕೆ ಮೊದಲು ನೋಟಿಫೈ ಮಾಡುತ್ತೇವೆ. ಆಲ್ಲಿ ಯಾವ ಅಬ್ಜಕ್ಷನ್ ಬರದೇ ಇದ್ದರೆ, ನೋಟಿಫೈ ಪ್ರಕಾರ ಕೊಡುತ್ತೇವೆ. ಈ ರೀತಿ ಕೊಟ್ಟಿದ್ದರೆ, ಅವುಗಳನ್ನು ಮಧ್ಯದಲ್ಲಿ ತೆಗೆಯುವುದಕ್ಕೆ ಬರುವುದಿಲ್ಲ. ಒಂದುವೇಳೆ ಇವುಗಳ ಬಗ್ಗೆ ನಾವು ಕ್ರಮ ತೆಗೆದುಕೊಂಡರೆ ಅವರು ಕೋರ್ಟಿಗೆ ಹೋಗುತ್ತಾರೆ. ಆದುದರಿಂದ ಈ ಬಗ್ಗೆ ನೋಟಿಫೈ ಆದ ಕೂಡಲೇ ಆಕ್ಷೇಪಣೆಗಳನ್ನು ತಿಳಿಸಬೇಕು.

ಶ್ರೀ ಜಿ. ರಾಜೂಗೌಡ.—ಗೆಜೆಟ್ ನೋಟಿಫಿಕೇಷನ್‌ನಲ್ಲಿ ತಿಳಿಸಿದಂತೆ, ಪ್ರತಿಯೊಂದು ಸಾರಾಯಿ ಅಂಗಡಿಗೂ, ತಾವು ಇಲಾಖೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ತೊಂದರೆ ಏನಿದೆ ? ದೇವಸ್ಥಾನ ಅಥವಾ ಶಾಲೆಗಳ ಹತ್ತಿರ ಕೊಡುವ ಮೊದಲೇ, ಬೇರೆ ಕಡೆಗೆ ಈ ಮಧ್ಯದ ಅಂಗಡಿಗಳಿಗೆ ಅವಕಾಶ ಕೊಡುವುದಕ್ಕೆ ಏಕೆ ನಿರ್ಧರಿಸಬಾರದು ?

ಶ್ರೀ ಜೆ. ಹೆಚ್. ಪಟೇಲ್.—ಈ ಸಾರಿ ನೋಟಿಫಿಕೇಷನ್ ಪ್ರಕಟಣೆ ಮಾಡುವುದಕ್ಕೆ ಮುಂಚೆ ಆಕ್ಷೇಪಣೆಗಳು ಬಂದಿದ್ದರೆ, ಆ ನೋಟಿಫಿಕೇಷನ್ ನಿಲ್ಲಿಸುತ್ತೇವೆ. ಮುಂದಿನ ವರ್ಷ ಇವುಗಳನ್ನು ಗಮನದಲ್ಲಿಟ್ಟುಕೊಂಡು ನೋಟಿಫೈ ಮಾಡುತ್ತೇವೆ.

ಬೆಳ್ತಂಗಡಿ ತಾಲ್ಲೂಕಿನ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಬಗ್ಗೆ

೪೦೫. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ವಿದ್ಯುಚ್ಛಕ್ತಿ, ಗಣಿ ಹಾಗೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಶಿಶಿಲ, ಸವಣಾಲು ಮತ್ತಿತರ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಕೆಗಾಗಿ ಬೇಕಾದ ಸಾಮಗ್ರಿಗಳನ್ನು ಒದಗಿಸದಿರಲು ಕಾರಣಗಳೇನು, ಹಾಗೂ ಯಾವಾಗ ಸಲಕರಣೆಗಳನ್ನು ಪೂರೈಸಲಾಗುತ್ತದೆ.

ಶ್ರೀ ಜೆ. ಎಚ್. ದೇಶಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಗ್ರಾಮಗಳ ವಿದ್ಯುದ್ದೀಕರಣಕ್ಕೆ ಬೇಕಾಗುವ ಸಾಮಗ್ರಿಗಳ ಪೂರೈಕೆಯಲ್ಲಿ ವಿಳಂಬವಾಗಿಲ್ಲ. ಸಾಮಗ್ರಿಗಳನ್ನು ಕೆಲಸಗಳ ಕಾರ್ಯಕ್ರಮಕ್ಕನುಗುಣವಾಗಿ ಸರಬರಾಜು ಮಾಡಲಾಗುತ್ತದೆ.

ಶ್ರೀ ಕೆ. ವಸಂತ ಬಂಗೇರ.—ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಈ ವಿಚಾರದಲ್ಲಿ ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ. ಈ ಬೆಳ್ತಂಗಡಿ ತಾಲ್ಲೂಕಿಗೆ

ಸೇರಿದ ಹಾಗೆ ೨೫ ಗ್ರಾಮಗಳಿಗೆ ವಿದ್ಯುತ್ ಹಾಕಬೇಕಾಗಿದೆ. ಈಗಾಗಲೇ ಅದಕ್ಕೆ ಸ್ಯಾಂಕ್ಷನ್ ಆಗಿದೆ. ಇದು ಲ್ಯಾಪ್ಸ್ ಆಗದೇ ಇದ್ದ ಹಾಗೆ ಈ ವರ್ಷದ ಡಿಸೆಂಬರ್ ಒಳಗಾದರೂ ಬೆಳ್ತಂಗಡಿ ತಾಲ್ಲೂಕಿಗೆ ಆದ್ಯತೆ ಕೊಟ್ಟು ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿಕೊಡುತ್ತೀರಾ ? ಶಿಶಿಲ ಗ್ರಾಮಕ್ಕೆ ಸ್ಯಾಂಕ್ಷನ್ ಆಗಿ ೩ ವರ್ಷವಾಯಿತು. ಇದಕ್ಕೆ ಅರಣ್ಯ ಇಲಾಖೆಯವರು ಕೆಇಬಿನವರಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಕೆಇಬಿ ಇಲಾಖೆಯವರು ಇದರ ಬಗ್ಗೆ ಅರಣ್ಯ ಇಲಾಖೆಗೆ ಬರೆದರೂ ಸಹ ಅವರು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ೨೦ ಅಂಶದ ಕಾರ್ಯಕ್ರಮದಲ್ಲೂ ಕೂಡ ಇದರ ಬಗ್ಗೆ ರೆಸಲ್ಯೂಷನ್ ಆಯಿತು. ಡಿಡಿಸಿ ಮೀಟಿಂಗ್‌ನಲ್ಲೂ ಸಹ ರೆಸಲೂಷನ್ ಆಯಿತು, ಅವರು ಬರವಣಿಗೆ ಏನೂ ಕೊಟ್ಟಿಲ್ಲ ಕಳೆದ ತಿಂಗಳು ಅರಣ್ಯ ಅಧಿಕಾರಿಗಳು ನಮ್ಮ ಊರಿಗೆ ಬಂದಿದ್ದರು. ಮರಗಳನ್ನು ಕಡಿದು ತೆಗೆದುಕೊಂಡು ಹೋಗುತ್ತಿದ್ದ ಲಾರಿಯನ್ನು ಮಂಗಳೂರಿನ ಡಿ.ಎಫ್. ಉಪ್ಪಿನ ಅಂಗಡಿ ಆರ್.ಎಫ್ ಮತ್ತು ಫಾರೆಸ್ಟ್ ಅಧಿಕಾರಿಗಳು ಹಿಡಿದು ಕೇಸ್ ಹಾಕಿದ್ದಾರೆ. ಈ ಅಧಿಕಾರಿಗಳ ಮೇಲೆ ವಿದ್ಯುತ್ ಇಲಾಖೆಯವರಿಗೆ ಯಾವ ಕಂಟ್ರೋಲ್ ಇಲ್ಲ. ಆದರಿಂದ ಅವರ ಮೇಲೆ ಏನಾ ಕೇಸ್ ಆನ್ನು ರಿಜಿಸ್ಟ್ರೇಷನ್ ಮಾಡಿದ್ದಾರೆ. ಆದುದರಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಕೆಇಬಿ ಮೇಲೆ ಹಾಕಿರತಕ್ಕಂಥಾ ಕೇಸನ್ನು ವಿತ್‌ಡ್ರಾ ಮಾಡಿಕೊಳ್ಳುವ ಹಾಗೆ ಮಾಡಬೇಕು ಅಲ್ಲದೇ ನಾನು ಮೊದಲೇ ಹೇಳಿದ ಹಾಗೆ ಬೆಳ್ತಂಗಡಿ ತಾಲ್ಲೂಕಿನ ಎಲ್ಲ ಗ್ರಾಮಗಳಿಗೂ ಸಹ ಈ ವರ್ಷದ ಕೊನೆಯೊಳಗೆ ವಿದ್ಯುತ್ ಪೂರೈಕೆಯನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಈ ವರ್ಷದ ಕೊನೆಯೊಳಗೆ ಲ್ಯಾಪ್ಸ್ ಆಗದೇ ಇದ್ದ ಹಾಗೆ ವಿದ್ಯುತ್ ಪೂರೈಕೆಯನ್ನು ಮಾಡಿಕೊಡುವ ಹಾಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು :—ಮುಂದೂಡಲಾದ ಪ್ರಶ್ನೆಗಳು.—೧೫ನೇ ಪಟ್ಟಿ. ಪ್ರಶ್ನೆ ೨೯೩ (೩೯೯) ಶ್ರೀ ಬಸವರಾಜ ಪಾಟೀಲ್, ಸದಸ್ಯರು ಹಾಜರಿಲ್ಲ.

ರಾಜ್ಯದಲ್ಲಿನ ಭೂಹೀನ ರೈತರ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ

೬೭೫ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ರಾಜ್ಯದಲ್ಲಿ ಭೂಹೀನ ರೈತರು ಕಳೆದ ೩ ವರ್ಷಗಳಿಂದ ಅಕ್ರಮವಾಗಿ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸಿ ಸಾಗುವಳಿದಾರರಿಗೆ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯನ್ನು ಸಕ್ರಮಗೊಳಿಸಿ ಅರ್ಹರಾದ ಸಾಗುವಳಿದಾರರಿಗೆ ಮಂಜೂರು ಮಾಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—ಮಾನ್ಯ ಸದಸ್ಯರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಮೊದಲನೇ ಗೌರ್ನಮೆಂಟ್ ಆರ್ಡರ್ ಪ್ರಕಾರ ಯಾರು ಅನ್ ಆಥರೈಸ್ಡ್ ಆಕ್ಯುಪೆಂಟ್ಸ್ ಇದ್ದರೋ ಅವರು ತಮ್ಮ ಜಮೀನನ್ನು ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ ೧೫-೧೧-೧೯೭೮ ರವರೆಗೆ ಅಪ್ಲೈ ಮಾಡಬಹುದಾಗಿತ್ತು. ಎರಡನೇ ಗೌರ್ನಮೆಂಟ್ ಆರ್ಡರ್ ಪ್ರಕಾರ ಯಾರು ಎಸ್.ಸಿ.ಎಸ್.ಟಿಯವರು ಅನ್‌ಆಥರೈಸ್ಡ್ ಆಕ್ಯುಪೆಂಟ್ಸ್ ಇದ್ದರೋ ಅವರು ತಮ್ಮ ಭೂಮಿಯನ್ನು ರೆಗ್ಯುಲರೈಸ್ ಮಾಡಿಕೊಳ್ಳುವುದಕ್ಕೆ ಅರ್ಜಿ ಹಾಕಲು ೧೫-೮-೧೯೮೨ ರವರೆಗೆ ಅವಕಾಶವಾಡಿಕೊಟ್ಟಿದ್ದಾರೆ. ಈಗಾಗಲೇ ಬಂದಂಥ ಅರ್ಜಿಗಳಲ್ಲಿ ಕೆಲವು ವಿಚಾರಣೆ ಆಗಿದೆ, ಇನ್ನು ಕೆಲವು ಆಗುತ್ತಾ ಇದೆ. ಯಾರು ಇದರ ಬಗ್ಗೆ ಅರ್ಜಿ ಹಾಕಿರಲಿಲ್ಲ ಅರ್ಹರಾಗಿರುವವರು ಮತ್ತೆ ಅರ್ಜಿಹಾಕಿಕೊಳ್ಳಲು ಮತ್ತಷ್ಟು ಅವಕಾಶ ಮಾಡಿಕೊಡುವುದರ ಬಗ್ಗೆ ಸರ್ಕಾರ ಆದಷ್ಟು ಬೇಗ ಒಂದು ನಿರ್ಣಯ ತೆಗೆದುಕೊಳ್ಳುತ್ತದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಸಚಿವರು ಈ ಪ್ರಶ್ನೆಯ ಉತ್ತರವಾಗಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಸರ್ಕಾರೀ ಭೂಮಿಯನ್ನು ಸಕ್ರಮಗೊಳಿಸಿ ಅರ್ಹರಾದ ಸಾಗುವಳಿದಾರರಿಗೆ ಮಂಜೂರು ಮಾಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಅವರು ಪರಿಶೀಲಿಸುವ ಹೊತ್ತಿಗೆ ಭೂಹೀನ ರೈತರು ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಅಂಥ ಪರಿಸ್ಥಿತಿ